**ದಿನಾಂಕಃ 11-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ ಎನ್ ವಿ ವಕೀಲರಿಂದ**

5. 2016ನೇ ಸಾಲಿನಲ್ಲಿ ನಾನು ಕಾಟೀಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆ. 2016 ರಲ್ಲಿ ನಮ್ಮ ಮನೆಯಲ್ಲಿ ನಾನು, ನಮ್ಮ ತಾಯಿ, ನನ್ನ ಪತ್ನಿ ಹಾಗೂ ಮಕ್ಕಳು ವಾಸವಾಗಿದ್ದೆವು. ನಾಲ್ಕು ಎಕರೆ ಕೃಷಿ ಜಮೀನು ನಮಗೆ ಕಾಟೀಹಳ್ಳಿ ಗ್ರಾಮದಲ್ಲಿ ಇತ್ತು. ನನ್ನ ಜಮೀನಿನಲ್ಲಿ ಕೃಷಿ ಕೆಲಸಕ್ಕೆ ಅವಶ್ಯಕತೆ ಇದ್ದಾಗ ನಾನು ಕೂಲಿಯವರನ್ನು ಕರೆಸಿಕೊಳ್ಳುತ್ತಿದ್ದೆ. ನೀವು ನಾಲ್ಕು ಎಕರೆ ಕೃಷಿ ಜಮೀನಿನ ಮಾಲಿಕರಾಗಿದ್ದು ಆರ್ಥಿಕವಾಗಿ ಸದೃಢವಾಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ತಾಯಿಗೆ ನಾವು 3 ಜನ ಮಕ್ಕಳು, ನನ್ನ ಭಾಗಕ್ಕೆ ಒಂದು ಎಕರೆ 10 ಗುಂಟೆ ಜಮೀನು ಬಂದಿತ್ತು ಎಂದು ಉತ್ತರಿಸಿರುತ್ತಾರೆ. ನನಗೆ ಬೇರೆಯವರ ಜಮೀನಿಗೆ ಕೂಲಿಕೆಲಸಕ್ಕೆ ಹೋಗುವ ಅಭ್ಯಾಸ ಇತ್ತು. ಪ್ರಭುವಯ್ಯ ಒಬ್ಬರು ಆರ್ಥಿಕವಾಗಿ ಸದೃಢವಾಗಿದ್ದರು ಉಳಿದ ಸಹೋದರರು ತಲಾ 20 ಗುಂಟೆಯಷ್ಟು ಜಮೀನನ್ನು ಹೊಂದಿ ಸಾಮಾನ್ಯವಾದ ಆರ್ಥಿಕ ಸ್ಥಿತಿಯಲ್ಲಿದ್ದರು. ಪ್ರಭುವಯ್ಯ ರವರ ಸಹೋದರರರು ಅವರ ಜಮೀನಿನಲ್ಲಿ ಕೆಲಸಕ್ಕೆ ಬೇಕಾದಲ್ಲಿ ಮಾತ್ರ ಕೂಲಿ ಕಾರ್ಮಿಕರನ್ನು ಕರೆಸಿಕೊಳ್ಳುತ್ತಿದ್ದರು ಇಲ್ಲದಿದ್ದಲ್ಲಿ ಅವರೇ ಅವರ ಜಮೀನಿನಲ್ಲಿ ಕೆಲಸ ಮಾಡಿಕೊಳ್ಳುತ್ತಿದ್ದರು. ನಮ್ಮ ಜಮೀನಿನಲ್ಲಿ ಕೂಲಿಕೆಲಸ ಇಲ್ಲದಿದ್ದಲ್ಲಿ ಪ್ರಭುವಯ್ಯ ರವರ ಜಮೀನಿಗೆ ಕೂಲಿಕೆಲಸಕ್ಕೆ ಹೋಗುತ್ತಿದ್ದೆವು. ಮೃತ ಕುಮಾರಸ್ವಾಮಿ ಮೃತಪಡುವ ಪೂರ್ವದಲ್ಲಿ ಸುಮಾರು 8-10 ವರ್ಷದ ಹಿಂದೆ ಕೊಡ್ಲಿಪೇಟೆಯ ಕಾಫಿ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ಮೃತ ಕುಮಾರಸ್ವಾಮಿ ಹಾಗೂ ಆತನ ಕುಟುಂಬದವರು ಕಾಟೀಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಮೃತ ಕುಮಾರಸ್ವಾಮಿ

ಅವಿದ್ಯಾವಂತನಾಗಿದ್ದು ಆತನಿಗೆ ಹೆಚ್ಚಿನ ಲೋಕಜ್ಞಾನ ಇಲ್ಲದೆ ಆತನಿಗೆ ಸರ್ಕಾರಿ ಕಚೇರಿಗಳ ಕೆಲಸಗಳ ಬಗ್ಗೆ ತಿಳಿದಿರಲಿಲ್ಲ ಎಂದರೆ ಸರಿ. ಪ್ರಭುವಯ್ಯ ರವರು ಬಿ ಎಸ್ ಎನ್ ಎಲ್ ನಲ್ಲಿ ಹಾಗೂ ಕಾಫಿ ಕ್ಯೂರಿಂಗ್ ನಲ್ಲಿ ಕೆಲಸ ಮಾಡಿ ಅವರಿಗೆ ಸರ್ಕಾರಿ ಸ್ಕೀಂಗಳ ಬಗ್ಗೆ ಹಾಗೂ ಸವಲತ್ತುಗಳ ಬಗ್ಗೆ ಲೋಕಜ್ಞಾನ ಇತ್ತು ಎಂದರೆ ಸರಿ.

6. ಪ್ರಭುವಯ್ಯ ರವರಿಗೆ ಸೇರಿದ ತಕರಾರಿನ ಆಸ್ತಿಗೆ ನಾನು 2-3 ಬಾರಿ ಭೇಟಿ ನೀಡಿರುತ್ತೇನೆ. ಘಟನೆಯ ಹಿಂದಿನ ದಿನ ಸಹ ಚಾಸಾ-1, 3 ರಿಂದ 5 ರವರು ತಕರಾರಿನ ಆಸ್ತಿಗೆ ಭೇಟಿ ನೀಡಿದ್ದರು ಎಂದರೆ ಸರಿಯಲ್ಲ. ಘಟನೆಯ ಹಿಂದಿನ ದಿನ ಚಾಸಾ-1, 3 ರಿಂದ 5 ಹಾಗೂ ನಾನೂ ಸಹ ತಕರಾರಿನ ಆಸ್ತಿಗೆ ಹೋಗಿ ಕೊಟ್ಟೆಗೆಯನ್ನು ಕೀಳಲು ಪ್ರಯತ್ನಿಸಿದ್ದು ಈ ಬಗ್ಗೆ ಆರೋಪಿಗಳು ಪೊಲೀಸರಲ್ಲಿ ದೂರು ದಾಖಲಿಸಿದ್ದು ಪೊಲೀಸರು ನಮಗೆ ಕೊಟ್ಟಿಗೆ ಕೀಳದಂತೆ ಹಾಗೂ ಮರುದಿನ ಪ್ರಭುವಯ್ಯನನ್ನು ಠಾಣೆಗೆ ಕರೆತರುವಂತೆ ಆದೇಶಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ಪ್ರಭುವಯ್ಯ ರವರಿಗೆ ಸೇರಿದ ಮನೆ 1ನೇ ಆರೋಪಿ ಮಲ್ಲಿಕಾರ್ಜುನರವರಿಗೆ ವರ್ಗಾವಣೆಗೊಂಡಿದ್ದು ಆನಂತರ ನಾನು ಸದರಿ ಮನೆಯ ಬಳಿ ಭೇಟಿ ನೀಡಿದಾಗ ಸದರಿ ಮನೆಯ ಹಿಂದೆ ಕೊಟ್ಟಿಗೆ ನಿರ್ಮಾಣ ಆಗಿರುವುದನ್ನು ಗಮನಿಸಿರುತ್ತೇನೆ. ಸದರಿ ಕೊಟ್ಟಿಗೆಯ ವಿಸ್ತೀರ್ಣ 20 x 11 ಅಡಿ ಇತ್ತು. ಸದರಿ ಕೊಟ್ಟಿಗೆಯ ಚಾವಣಿಗೆ ಹಂಚು ಹಾಗೂ ಮರದ ತುಂಡುಗಳನ್ನು ಹಾಕಲಾಗಿತ್ತು. ತಕರಾರಿನ ಆಸ್ತಿಯಲ್ಲಿ ಪ್ರಭುವಯ್ಯ ವಾಸವಾಗಿದ್ದ ಕಾಲದಲ್ಲಿ ಸಹ ನಾನು ಭೇಟಿ ನೀಡಿರುತ್ತೇನೆ. ಪ್ರಭುವಯ್ಯ ವಾಸವಾಗಿದ್ದ ಕಾಲದಲ್ಲಿ ಸಹ ಮನೆಯ ಹಿಂದೆ ಕೊಟ್ಟಿಗೆ ಇತ್ತು. ಪ್ರಭುವಯ್ಯ ತಕರಾರಿನ ಆಸ್ತಿ ಸೈಟು ನಂ.57ಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ನೀಡಿ ನನ್ನ ಜೊತೆ ಚರ್ಚೆ ಮಾಡಿಲ್ಲ. 1ನೇ ಆರೋಪಿ ಮಲ್ಲಿಕಾರ್ಜುನರವರಿಗೆ

ಮನೆ ವರ್ಗಾವಣೆಯಾದ ನಂತರ ನಾನು ಸದರಿ ಮನೆಯ ಬಳಿ ಹೋಗಿಲ್ಲ ಈ ಘಟನೆ ಕಾಲದಲ್ಲಿ ಮಾತ್ರ ಹೋಗಿರುತ್ತೇನೆ.

7. ಸೈಟು ನಂ.56 ಹಾಗೂ 57 ಎರಡೂ ಸೈಟುಗಳನ್ನು ಪ್ರಭುವಯ್ಯರವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸೈಟು ನಂ.57 ಪ್ರಭುವಯ್ಯರವರೇ ಬೇನಾಮಿಯಾಗಿ ಅವರ ಹೆಸರಿನಲ್ಲಿ ಮಾಡಿಕೊಂಡ ಆಸ್ತಿ ಆಗಿತ್ತು ಎಂದರೆ ನನಗೆ ತಿಳಿದಿಲ್ಲ. 2015 ರಲ್ಲಿ ಪ್ರಭುವಯ್ಯ ರವರ ಸಹೋದರಿ 5ನೇ ಆರೋಪಿ ವಿಶಾಲಾಕ್ಷಿ ರವರು ಒಂದು ನೋಟೀಸು ನೀಡಿ ಆಲೂರು ನ್ಯಾಯಾಲಯದಲ್ಲಿ ಅಸಲು ದಾವೆ ನಂ.89/2015 ನ್ನು ದಿ:25.03.2015 ರಲ್ಲಿ ದಾಖಲಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ಘಟನೆ ಆಗುವ 6-7 ವರ್ಷಗಳ ಮೊದಲು 1ನೇ ಆರೋಪಿ ಮಲ್ಲಿಕಾರ್ಜುನ ಹಾಗೂ ಪ್ರಭುವಯ್ಯ ರವರ ನಡುವೆ ತಕರಾರಿನ ಆಸ್ತಿಯ ಬಗ್ಗೆ ವ್ಯವಹಾರ ಆಗಿದ್ದು ಅಂದಿನಿಂದ 1ನೇ ಆರೋಪಿ ಮಲ್ಲಿಕಾರ್ಜುನ್ ಸದರಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿದಾರರು ಮಲ್ಲಿಕಾರ್ಜುನರವರು ವಾಸವಾಗಿದ್ದರು ಆದರೆ ವ್ಯವಹಾರ ಎಷ್ಟು ವರ್ಷದ ಹಿಂದೆ ವ್ಯವಹಾರ ಆಯಿತು ಎಂದು ನನಗೆ ತಿಳಿದಿಲ್ಲ ಎಂದು ಉತ್ತರಿಸುತ್ತಾರೆ. ತಕರಾರಿನ ಆಸ್ತಿಗೆ ಸಂಬಂಧಿಸಿದಂತೆ ಏನು ವ್ಯವಹಾರ ಆಗಿತ್ತು, ಏನು ಪತ್ರ ಆಗಿತ್ತು, ಎಷ್ಟು ಹಣ ಪಾವತಿ ಆಗಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಎರಡು ಸೈಟುಗಳನ್ನು ಸಹ ಮಾರಾಟ ಮಾಡುವುದಾಗಿ ಒಪ್ಪಿಕೊಂಡ ಪ್ರಭುವಯ್ಯ ಅಸಲು ದಾವೆ 89/2015 ದಾಖಲಾದ ನಂತರ 1ನೇ ಆರೋಪಿ ಮಲ್ಲಿಕಾರ್ಜುನರವರಿಗೆ ಒಂದು ಸೈಟನ್ನು ಮಾತ್ರ ಮಾರಾಟ ಮಾಡಿ ಪತ್ರ ಬರೆದುಕೊಟ್ಟಿದ್ದ ಎಂದರೆ ನನಗೆ ತಿಳಿದಿಲ್ಲ.

8. 3ನೇ ಆರೋಪಿ ರವಿ ಹಾಗೂ 4ನೇ ಆರೋಪಿ ಓಂಕಾರ ಉ: ಆನಂದ

ನಮ್ಮ ಗ್ರಾಮಸ್ಥರಲ್ಲ ಎಂದರೆ ಸರಿ. ನನಗೆ 3 ಹಾಗೂ 4ನೇ ಆರೋಪಿಗಳ ತಂದೆಯ ಹೆಸರು ಹಾಗೂ ಅವರು ಎಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ. ಹಿಂದೆ ಕಾರ್ಯಗಳಲ್ಲಿ 3 ಹಾಗೂ 4ನೇ ಆರೋಪಿಗಳು ಭಾಗಿಯಾಗಿದ್ದ ಕಾಲದಲ್ಲಿ ನಾನು ಅವರನ್ನು ಹಿಂದೆ ಸಹ ನೋಡಿದ್ದೆ. ಪ್ರಭುವಯ್ಯ ಹಾಗೂ ನಾನು ಒಂದೇ ಜಾತಿಯವರಲ್ಲ ಹಾಗೂ ಸಂಬಂಧಿಕರೂ ಸಹ ಅಲ್ಲ. 3 ಹಾಗೂ 4ನೇ ಆರೋಪಿಗಳನ್ನು ನಾನು ಮಾತನಾಡಿಸಿ ನನಗೆ ಅವರ ಪರಿಚಯ ಇತ್ತು.

9. ಘಟನೆ ನಡೆದ ದಿನ ಅಂದರೆ ದಿಃ28.11.2016 ರಂದು ನಾವು ನಮ್ಮ ಊರಿನಿಂದ ತಕರಾರಿನ ಸೈಟಿಗೆ ಪ್ರಯಾಣಿಕರ ಆಟೋರಿಕ್ಷಾದಲ್ಲಿ ಬಂದಿರುತ್ತೇವೆ. ನಮ್ಮ ಊರಿನಿಂದ ಇಬ್ಡಾಣಿ ಸುಮಾರು 8 ಕಿ ಮೀ ದೂರದಲ್ಲಿದೆ. ನಾವು ನಮ್ಮ ಊರಾದ ಕಾಟೀಹಳ್ಳಿಯಿಂದ ಬೆಳಿಗ್ಗೆ 7.30 ಗಂಟೆ ಸಮಯಕ್ಕೆ ಹೊರಟು ಬೆಳಿಗ್ಗೆ 8 ಗಂಟೆ ಸಮಯಕ್ಕೆ ಇಬ್ಡಾಣಿಯ ತಕರಾರಿನ ಸೈಟಿಗೆ ಬಂದಿರುತ್ತೇವೆ. ಮೃತ ಕುಮಾರಸ್ವಾಮಿ ಹಾಗೂ ಚಾಸಾ–1 ಪಾಲಾಕ್ಷರವರು ಅದೇ ದಿನ ಕೊಟ್ಟಿಗೆಯನ್ನು ಕೀಳಬೇಕಾಗಿದೆ ಎಂದು ಹೇಳಿ ಕರೆದುಕೊಂಡು ಹೋದರು. ನಾವು ಇಬ್ಡಾಣಿಗೆ ಪ್ರಯಾಣಿಸಿದ ಆಟೋರಿಕ್ಷಾ ಯಾರಿಗೆ ಸೇರಿದ್ದು ಎಂದು ನನಗೆ ತಿಳಿದಿಲ್ಲ. ನಾವು ಕೊಟ್ಟಿಗೆಯನ್ನು ಕೀಳಲು ಕೇವಲ ಒಂದು ಹಾರೆಯನ್ನು ಮಾತ್ರ ತೆಗೆದುಕೊಂಡು ಹೋಗಿದ್ದೆವು. ಬೇಲೂರು ರಸ್ತೆಯಿಂದ ಕುಮಾರಸ್ವಾಮಿ ರವರ ಪತ್ನಿ ವನಜಾಕ್ಷಮ್ಮ ರವರ ಸೈಟಿನ ಮೂಲಕ ನಾವು ತಕರಾರಿನ ಸೈಟಿಗೆ ಹೋಗಿರುತ್ತೇವೆ. ಗಲಾಟೆಯಾದ ಸ್ಥಳ ವನಜಾಕ್ಷಮ್ಮರವರ ಸೈಟಿನ ಪಕ್ಕದಲ್ಲಿ ಇರುತ್ತದೆ. ನಾವು ಪ್ರಯಾಣಿಸಿದ ಆಟೋವನ್ನು ರಸ್ತೆಯಲ್ಲಿಯೇ ನಿಲ್ಲಿಸಿದೆವು. ತಕರಾರಿನ ಸೈಟಿಗೆ ತಂತಿ ಬೇಲಿ ಹಾಕಲಾಗಿರಲಿಲ್ಲ. ತಕರಾರಿನ ಸೈಟಿನ ವಿಸ್ತೀರ್ಣ 30 x 40 ಅಡಿ ಇರುತ್ತದೆ. ತಕರಾರಿನ

ಸೈಟು ಖಾಲಿ ಜಾಗ ಆಗಿರುತ್ತದೆ. ತಕರಾರು ಸೈಟಿನ ಎಡ ಬಲದಲ್ಲಿ ಸುಮಾರು 30, 40 ಮೀಟರ್ ದೂರದಲ್ಲಿ ವಾಸದ ಮನೆಗಳು ಇರುತ್ತವೆ. ಘಟನೆ ಪ್ರಶ್ನಿತ ಸೈಟಿನ ಮಧ್ಯದಲ್ಲಿಯೇ ನಡೆದಿರುತ್ತದೆ. ಆರೋಪಿಗಳು ಸ್ಥಳಕ್ಕೆ ಬರುವ ಪೂರ್ವದಲ್ಲಿ ನಾವು ಪ್ರಶ್ನಿತ ಸೈಟಿನಲ್ಲಿ ಕೆಲಸ ಪ್ರಾರಂಭ ಮಾಡಿದೆವು. ಆರೋಪಿಗಳು ಸ್ಥಳಕ್ಕೆ ಬಂದಾಗ ನಾವು ಕೊಟ್ಟಿಗೆಯ ಮೇಲ್ಭಾಗದ ಹಂಚುಗಳನ್ನು ತೆರವುಗೊಳಿಸಿರಲಿಲ್ಲ. ನಾವು ಕೊಟ್ಟಿಗೆಯ ಗೋಡೆಗಳನ್ನು ಕೆಡವಿರಲಿಲ್ಲ ನಾವು ಕೊಟ್ಟಿಗೆಯ ಹಂಚುಗಳನ್ನು ತೆರವುಗೊಳಿಸಬೇಕು ಎನ್ನುವಷ್ಟರಲ್ಲಿ ಆರೋಪಿಗಳು ಸ್ಥಳಕ್ಕೆ ಬಂದಿರುತ್ತಾರೆ. ನಾವು ಸ್ಥಳಕ್ಕೆ ಹೋದ 5 ನಿಮಿಷಗಳಲ್ಲಿ ಆರೋಪಿಗಳು ಸ್ಥಳಕ್ಕೆ ಬಂದಿರುತ್ತಾರೆ. ಘಟನೆ ಸುಮಾರು 15 ನಿಮಿಷದ ಕಾಲ ನಡೆದಿರುತ್ತದೆ. 15 ನಿಮಿಷಗಳ ಅವಧಿಯಲ್ಲಿ ಕೇವಲ ಮಾತುಕತೆ ಆಗಿರುತ್ತದೆಯೋ ಅಥವಾ ಹೊಡೆದಾಟ ಸಹ ಆಗಿರುತ್ತದೆಯೋ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಹೊಡೆದಾಟ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಈ 15 ನಿಮಿಷಗಳ ಅವಧಿಯಲ್ಲಿ ಯಾವುದಾದರೂ ಆರೋಪಿಗಳಿಗೆ ಪೆಟ್ಟಾಗಿತ್ತ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಯಾವುದೇ ಆರೋಪಿಗಳಿಗೆ ಪೆಟ್ಟಾಗಿರಲಿಲ್ಲ ಎಂದು ಸಾಕ್ಷಿದಾರರು ಉತ್ತರಿಸಿರುತ್ತಾರೆ. ನಾನು ಘಟನಾ ಸ್ಥಳದಲ್ಲಿ ಇರುವಷ್ಟು ಕಾಲದಲ್ಲಿ ಹಾಗೂ ಗಾಯಾಳು ಕುಮಾರಸ್ವಾಮಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟು ಅವಧಿಯಲ್ಲಿ ನನ್ನ ಜೊತೆ ಸ್ಥಳಕ್ಕೆ ಬಂದಿದ್ದ ವ್ಯಕ್ತಿಗಳು ಆರೋಪಿ-1 ರಿಂದ 5 ರವರಿಗೆ ಯಾವುದೇ ಹಲ್ಲೆ ನಡೆಸಿರಲಿಲ್ಲ.

10. ಪ್ರಶ್ನಿತ ತಕರಾರಿನ ಸೈಟಿನ ಮುಂಭಾಗ ಕಲ್ಲಿನ ಚರಂಡಿ ಇರುವುದಿಲ್ಲ. ಮುಮಾ-9 ರಿಂದ 12 ದೊಣ್ಣೆಗಳು ಕೊಟ್ಟಿಗೆಯ ಸೂರಿಗೆ ಹಾಕಿದ್ದ ದೊಣ್ಣೆಗಳು ಎಂದರೆ ನನಗೆ ತಿಳಿದಿಲ್ಲ ಸದರಿ ದೊಣ್ಣೆಗಳು ಆರೋಪಿಗಳ ಕೈಗಳಲ್ಲಿ ಇದ್ದವು. ಘಟನೆ ಕಾಲದಲ್ಲಿ

ಕುಮಾರಸ್ವಾಮಿ ರವರ ತಲೆಗೆ ಎಷ್ಟು ಏಟುಗಳು ಬಿದ್ದಿದ್ದವು ಎಂದರೆ ಸಾಕ್ಷಿದಾರರು ತಾನು ಲೆಕ್ಕ ಹಾಕಿಲ್ಲ 1 ಹಾಗೂ 2ನೇ ಆರೋಪಿಗಳು ತಲಾ 2-3 ಏಟುಗಳನ್ನು ಹೊಡೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಗಲಾಟೆ ಪ್ರಾರಂಭ ಆದಾಗ ಸಂಬಂಧಿಕರ ನಡುವೆ ಗಲಾಟೆ ಆಗುತ್ತಿದೆ ಎಂದು ನಾವು ಗಲಾಟೆಯನ್ನು ಬಿಡಿಸಲು ಮೊದಲು ಹೋಗಲಿಲ್ಲ ಕೊನೆಯಲ್ಲಿ ಹೋಗಿ ಗಲಾಟೆಯನ್ನು ಬಿಡಿಸಿರುತ್ತೇವೆ. ಗಲಾಟೆಯಾದ ಕಾಲದಲ್ಲಿ ಪ್ರಶ್ನಿತ ಸ್ಥಳದ ಬಳಿ ಇರುವ ಮನೆಯ ವಾಸಿಗಳು ಸ್ಥಳಕ್ಕೆ ಬಂದಿರಲಿಲ್ಲ. ಗಾಬರಿಯಲ್ಲಿದ್ದ ನಾವು ಬೇರೆ ಯಾರಾದರೂ ವ್ಯಕ್ತಿಗಳು ಗಲಾಟೆಯನ್ನು ಗಮನಿಸುತ್ತಿದ್ದಾರೋ ಎಂಬುದನ್ನು ನಾವು ಗಮನಿಸಲಿಲ್ಲ. ಕುಮಾರಸ್ವಾಮಿಗೆ 1 ಹಾಗೂ 2ನೇ ಆರೋಪಿಗಳು ಹಲ್ಲೆ ನಡೆಸಿದ ಕಾಲದಲ್ಲಿ ನಾನು ಅವರಿಂದ ಸುಮಾರು 25-30 ಅಡಿ ದೂರದಲ್ಲಿದ್ದೆ. ನನ್ನ ಜೊತೆ ಬಂದಿದ್ದ ಚಾಸಾ-3 ಕುಮಾರ, ಚಾಸಾ-4 ಅಣ್ಣಪ್ಪ ಹಾಗೂ ಚಾಸಾ-5 ರಾಜಯ್ಯ ಸಹ ನನ್ನ ಜೊತೆಯಲ್ಲಿಯೇ ಇದ್ದರು. ಘಟನೆ ಕಾಲದಲ್ಲಿ ಹಾರೆ ಯಾರ ಬಳಿ ಇತ್ತು ಎಂಬ ವಕೀಲರ ಸಲಹೆಗೆ ಸಾಕ್ಷಿದಾರರು ಮೊದಲು ನಟರಾಜರವರ ಬಳಿ ಇತ್ತು ಎಂದು ಹೇಳಿ ನಂತರ ಚಾಸಾ-4 ಅಣ್ಣಪ್ಪ ರವರ ಬಳಿ ಇತ್ತು ಎಂದು ಉತ್ತರಿಸಿರುತ್ತಾರೆ. ಚಾಸಾ-1 ಪಾಲಾಕ್ಷ ಸಹ ನಮ್ಮ ಜೊತೆಯಲ್ಲಿಯೇ ಇದ್ದ. ಗಲಾಟೆಯಾಗುತ್ತಿದ್ದ ಸ್ಥಳದಲ್ಲಿಯೇ 3ನೇ ಆರೋಪಿ ರವಿ ಹಾಗೂ 4ನೇ ಆರೋಪಿ ಓಂಕಾರ್ ಸಹ ಇದ್ದರು. ನಾನು ಸ್ಥಳಕ್ಕೆ ಬಂದಿದ್ದ ಆಟೋರಿಕ್ಷಾ ನಮ್ಮನ್ನು ಸ್ಥಳದಲ್ಲಿ ಬಿಟ್ಟ ನಂತರ ಹೊರಟು ಹೋಗಿತ್ತು.

11. ನಾವು ಗಾಯಾಳುಗಳನ್ನು ಬೇಲೂರು ರಸ್ತೆಯವರೆಗೆ ಎತ್ತಿಕೊಂಡು ಬಂದು ಅಲ್ಲಿಗೆ ಅಲ್ಲಿಂದ ಹಾದು ಹೋಗುತ್ತಿದ್ದ ಒಂದು ಕಾರಿನಲ್ಲಿ ಅವರನ್ನು ಆಸ್ಪತ್ರೆಗೆ ಕರೆತಂದಿರುತ್ತೇವೆ. ಘಟನಾ ಸ್ಥಳದಿಂದ ಬೇಲೂರು ಮುಖ್ಯ ರಸ್ತೆ ಸುಮಾರು 20-30 ಮೀ

ದೂರದಲ್ಲಿದೆ. ಗಾಯಗೊಂಡಿದ್ದ ಕುಮಾರಸ್ವಾಮಿಯನ್ನು ನಾನು ಹಾಗೂ ಚಾಸಾ-3 ಕುಮಾರ ಸೇರಿ ಘಟನಾ ಸ್ಥಳದಿಂದ ಎತ್ತಿಕೊಂಡು ಬೇಲೂರು ರಸ್ತೆಯವರೆಗೆ ತಂದಿರುತ್ತೇವೆ. ನಾವು ಗಾಯಾಳು ಕುಮಾರಸ್ವಾಮಿಯನ್ನು ಎತ್ತಿಕೊಂಡು ಬರುವಾಗ ಅವರಿಗೆ ಆಗಿದ್ದ ಗಾಯಗಳಿಂದ ರಕ್ತಸ್ರಾವ ಆಗುತ್ತಿತ್ತು. ಗಾಯಾಳು ಕುಮಾರಸ್ವಾಮಿ ಎತ್ತಿಕೊಂಡು ಬಂದ ಕಾರಣದಿಂದ ನನ್ನ ಹಾಗೂ ಚಾಸಾ-3 ಕುಮಾರನ ಬಟ್ಟೆಗಳಿಗೆ ಸಹ ರಕ್ತ ಆಗಿತ್ತು. ಗಾಯಾಳುವನ್ನು ಆಸ್ಪತ್ರೆಗೆ ಕರೆತಂದ ಕಾರಿನ ನೊಂದಾವಣಿ ಸಂಖ್ಯೆ ಹಾಗೂ ಕಾರು ಯಾರಿಗೆ ಸೇರಿದ್ದು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದ ಕಾಲದಲ್ಲಿ ರಕ್ತ ಆಗಿದ್ದ ನನ್ನ ಬಟ್ಟೆಗಳನ್ನು ಬಿಚ್ಚಿಕೊಡುವಂತೆ ಕೇಳಿಲ್ಲ ಹಾಗೂ ರಕ್ತ ಆಗಿದ್ದ ನನ್ನ ಬಟ್ಟೆಗಳನ್ನು ನಾನು ಪೊಲೀಸರಿಗೆ ನೀಡಿಲ್ಲ. ಪೊಲೀಸರು ಆಸ್ಪತ್ರೆಗೆ ಬಂದ ಕಾಲದಲ್ಲಿ ಘಟನೆಯ ಬಗ್ಗೆ ನನ್ನನ್ನು ಕೇಳಿಲ್ಲ ಕೇವಲ ಚಾಸಾ-1 ಪಾಲಾಕ್ಷ ರವರನ್ನು ಕೇಳಿರುತ್ತಾರೆ.

12. ನಾನು ಉಡುಪಿಯ ಆಸ್ಪತ್ರೆಗೆ ಹೋದ ಕಾಲದಲ್ಲಿ ಪೊಲೀಸರು ಬಂದಿರಲಿಲ್ಲ. ಬೆಳಗಿನ ಜಾವ ಸುಮಾರು 5.30 ಸಮಯಕ್ಕೆ ಹಾಸನದ ಪೊಲೀಸರು ಉಡುಪಿಯ ಆಸ್ಪತ್ರೆಗೆ ಬಂದಿರುತ್ತಾರೆ. ನಾನು ನನ್ನ ರಕ್ತ ಆಗಿದ್ದ ಬಟ್ಟೆಯನ್ನು ಮನೆಯಲ್ಲಿ ಬದಲಾಯಿಸಿ ಬೇರೆ ಬಟ್ಟೆ ತೊಟ್ಟು ಉಡುಪಿಗೆ ಹೋಗಿದ್ದೆ. ನಿಪಿ-5 ಶವತನಿಖಾ ವರದಿಗೆ ಸಹಿ ಮಾಡುವ ಕಾಲದಲ್ಲಿ ನಾನು ಘಟನೆಯ ಪ್ರತ್ಯಕ್ಷ ಸಾಕ್ಷಿ ಆಗಿದ್ದ ಬಗ್ಗೆ ಪೊಲೀಸರಿಗೆ ಘಟನೆಯ ಬಗ್ಗೆ ತಿಳಿಸಲಿಲ್ಲ. ಘಟನೆಯ ಸಂಬಂಧ ಪೊಲೀಸರು ನಿಪಿ-5 ಶವತನಿಖಾ ವರದಿ ತಯಾರಿಸುವ ಕಾಲಕ್ಕೆ ನನ್ನನ್ನು ಕೇಳಿರುತ್ತಾರೆ. ನಾನು ಘಟನೆಯ ಪ್ರತ್ಯಕ್ಷ ಸಾಕ್ಷಿ ಆಗಿರುವ ಬಗ್ಗೆ ಆ ಕಾಲದಲ್ಲಿ ಪೊಲೀಸರಿಗೆ ತಿಳಿಸಲಿಲ್ಲ ನಾನು ಕೇವಲ ನಿಪಿ-5 ಶವತನಿಖಾ ವರದಿಗೆ ನನ್ನ ಸಹಿ ಮಾಡಿದೆ. ನಿಪಿ-5 ಶವತನಿಖಾ ವರದಿ ಕಾಲದಲ್ಲಿ ನಾನು ಘಟನೆಯನ್ನು

ಪ್ರತ್ಯಕ್ಷವಾಗಿ ನೋಡಿರುವ ಬಗ್ಗೆ ಪೊಲೀಸರಿಗೆ ಹೇಳಲು ಯಾವುದೇ ತೊಂದರೆ ಇರಲಿಲ್ಲ. ಉಡುಪಿ ಆಸ್ಪತ್ರೆಗೆ ನಾನು ಒಬ್ಬನೇ ಹೋಗಿರುತ್ತೇನೆ.

13. ದಿಃ28.11.2016 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ನಾನು ಚಾಸಾ–1 ಪಾಲಾಕ್ಷ, ಚಾಸಾ–3 ಕುಮಾರ, ಚಾಸಾ–10 ನಟರಾಜ, ಪುನೀತ್, ಪದ್ಮ, ವನಜಾಕ್ಷಿ, ಪ್ರಭುವಯ್ಯ, ರೂಪ, ಅಣ್ಣಪ್ಪ, ಶಂಕರಪ್ಪ ರವರು ಅಕ್ರಮ ಕೂಟ ಕಟ್ಟಿಕೊಂಡು ಕೈಗಳಲ್ಲಿ ರಾಡು, ಮಚ್ಚು ಹಾಗೂ ದೊಣ್ಣೆಗಳನ್ನು ಹಿಡಿದುಕೊಂಡು ಪ್ರಶ್ನಿತ ಸ್ಥಳದಲ್ಲಿ ಕೊಟ್ಟಿಗೆಯನ್ನು ಕೀಳಲು ಹೋಗಿದ್ದೆವು ಎಂದರೆ ಸರಿಯಲ್ಲ ನಾವು 6 ಜನ ಮಾತ್ರ ಕೊಟ್ಟಿಗೆಯನ್ನು ತೆಗೆಯಲು ಹೋಗಿದ್ದೆವು. ನಾವು ಸ್ಥಳಕ್ಕೆ ಹೋಗಿ ಕೊಟ್ಟಿಗೆಯ ಹಂಚುಗಳನ್ನು ಇಳಿಸಿ ಕೊಟ್ಟಿಗೆಯ ಅರ್ಧ ಗೋಡೆಗಳನ್ನು ಹೊಡೆದು ಹಾಕಿದ್ದೆವು ಎಂದರೆ ಸರಿಯಲ್ಲ. ಆ ಕಾಲದಲ್ಲಿ ಆರೋಪಿ–1 ರಿಂದ 3 ಹಾಗೂ 5 ರವರು ಮಾತ್ರ ಕೊಟ್ಟಿಗೆಯನ್ನು ಕೀಳಲು ಕಾರಣವೇನು ಎಂದು ಪ್ರಶ್ನಿಸಿರುತ್ತಾರೆ ಎಂದರೆ 4ನೇ ಆರೋಪಿ ಓಂಕಾರ್ ಸಹ ಉಳಿದ ಆರೋಪಿಗಳ ಜೊತೆ ಇದ್ದು ಕೊಟ್ಟಿಗೆಯನ್ನು ಕೀಳಲು ಕಾರಣವೇನು ಎಂದು ಪ್ರಶ್ನಿಸಿರುತ್ತಾರೆ. ಘಟನೆಯ ಕಾಲದಲ್ಲಿ ಮೃತ ಕುಮಾರ ಹಾಗೂ ಚಾಸಾ–1 ಪಾಲಾಕ್ಷ ರವರು 2ನೇ ಆರೋಪಿ ಪರಮೇಶ ರವರಿಗೆ ಮಚ್ಚಿನಿಂದ ಹೊಡೆದು ಗಾಯಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಕಾಲದಲ್ಲಿ ಚಾಸಾ–10 ನಟರಾಜ 1ನೇ ಆರೋಪಿ ಮಲ್ಲಿಕಾರ್ಜುನರವರಿಗೆ ರಿಪೀಸ್ ಪಟ್ಟಿಯಿಂದ ತೊಡೆಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ 3ನೇ ಆರೋಪಿ ರವಿಗೆ ಪುನೀತ ಒಂದು ರಿಪೀಸ್ ಪಟ್ಟಿಯಿಂದ ಕೈಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಪದ್ಮ ಹಾಗೂ ವನಜಾಕ್ಷಿ ರವರು 5ನೇ ಆರೋಪಿ ವಿಶಾಲಾಕ್ಷಿಗೆ ಕೈಗಳಿಂದ ಹೊಡೆದಿರುತ್ತಾರೆಂದರೆ ಸರಿಯಲ್ಲ. ಸ್ಥಳಕ್ಕೆ

ರಾಜಗುಪ್ತ ಹಾಗೂ ಸುಜಾತ ಎಂಬುವರು ಬಂದು ಜಗಳವನ್ನು ಬಿಡಿಸಿ ಗಾಯಗೊಂಡಿದ್ದ 2ನೇ ಆರೋಪಿ ಪರಮೇಶನನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆಂದರೆ ಸರಿಯಲ್ಲ. 2ನೇ ಆರೋಪಿ ಪರಮೇಶ್ ಗಾಯಗೊಂಡು ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿರುವುದನ್ನು ನಾನು ಗಮನಿಸಿಲ್ಲ.

14. ಆರೋಪಿಗಳು ಹಲ್ಲೆ ನಡೆಸಿದ ನಂತರ ದೊಣ್ಣೆಗಳನ್ನು ಬೇಲಿಯೊಳಗೆ ಎಸೆದು ಹೋಗಿರುತ್ತಾರೆ. ಘಟನಾ ಸ್ಥಳದಿಂದ 5 ಅಡಿ ದೂರದಲ್ಲಿ ಬೇಲಿ ಇರುತ್ತದೆ. ಘಟನಾ ಸ್ಥಳದಲ್ಲಿ ನಿಂತಲ್ಲಿ ಆರೋಪಿಗಳು ಬೇಲಿಗೆ ಎಸೆದಿದ್ದ ದೊಣ್ಣೆಗಳು ಕಾಣುತ್ತಿದ್ದವು. ಮುಮಾ-9 ರಿಂದ 12 ದೊಣ್ಣೆಗಳು ಹಲ್ಲೆಗೆ ಬಳಸಿದ ದೊಣ್ಣೆಗಳು ಆಗಿರದೆ ಕೊಟ್ಟಿಗೆಯ ಛಾವಣಿಗೆ ಬಳಸಿದ್ದ ದೊಣ್ಣೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳ ಮೇಲೆ ನಾವುಗಳು ನಡೆಸಿರುವ ಹಲ್ಲೆಗೆ ಸಂಬಂಧಿಸಿದಂತೆ ಹಾಸನ ಗ್ರಾಮಾಂತರ ಪೊಲೀಸ್ ಠಾಣಾ ಮೊಃನಂ.266/2016 ಪ್ರಕರಣದಲ್ಲಿ ನನ್ನ ವಿರುದ್ಧ ಸಹ ಪ್ರಕರಣ ದಾಖಲಾಗಿದ್ದು ನಾನು 10ನೇ ಆರೋಪಿಯಾಗಿ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುತ್ತಿದ್ದೇನೆ ಎಂದರೆ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದ್ದು ನಾನು ವಿಚಾರಣೆಗೆ ಹಾಜರಾಗುತ್ತಿದ್ದೇನೆ. ನಾನು ತಿಳಿಸಿರುವಂತೆ 1 ಹಾಗೂ 2ನೇ ಆರೋಪಿಗಳು ಕುಮಾರಸ್ವಾಮಿಗೆ ದೊಣ್ಣೆಗಳಿಂದ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಪಾಲಾಕ್ಷ ರವರಿಗೆ 3 ಹಾಗೂ 4ನೇ ಆರೋಪಿಗಳು ಯಾವುದೇ ಹಲ್ಲೆ ನಡೆಸಿಲ್ಲ ಎಂದರೆ ಸರಿಯಲ್ಲ. 5ನೇ ಆರೋಪಿತೆ ಬೇರೆ ಆರೋಪಿಗಳಿಗೆ ನಾನು ತಿಳಿಸಿರುವಂತೆ ಯಾವುದೇ ಕುಮ್ಮಕ್ಕು ನೀಡಿಲ್ಲ ಎಂದರೆ ಸರಿಯಲ್ಲ. ಘಟನೆಯಲ್ಲಿ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿದಾಗ ರಕ್ತ ಆಗಿದ್ದ ನನ್ನ ಬಟ್ಟೆಗಳು ಹಾಗೂ ಕೊಟ್ಟಿಗೆಯನ್ನು ಕೀಳಲು ನಾವು ತೆಗೆದುಕೊಂಡು ಹೋಗಿದ್ದ ಹಾರೆಯನ್ನು ನಾನು ಪೊಲೀಸರಿಗೆ ನೀಡಿಲ್ಲ. ಸ್ಥಳಕ್ಕೆ ಬಂದ ರಾಜಯ್ಯ ಹಾಗೂ ಅಣ್ಣಪ್ಪ ರವರು ನಾವು ಕೊಟ್ಟಿಗೆ ಕೀಳಲು ತೆಗೆದುಕೊಂಡು

ಹೋಗಿದ್ದ ಹಾರೆಯನ್ನು ಸ್ಥಳದಿಂದ ತಂದಿರುತ್ತಾರೆ. ಆರೋಪಿಗಳು ದಾಖಲಿಸಿರುವ ಪ್ರಕರಣದಲ್ಲಿ ನಾನು ಒಬ್ಬ ಆರೋಪಿ ಆಗಿರುವ ಕಾರಣ ಈ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ–5 ಶವತನಿಖಾ ವರದಿಗೆ ಸಹಿ ಮಾಡಿದ ಕಾಲದಲ್ಲಿ ಮೃತನ ಶವ ಪರೀಕ್ಷೆ ಆಗಿರಲಿಲ್ಲ. ಮೃತನ ಶವವನ್ನು ಇನ್ನೂ ಬಿಳಿಯ ಬಟ್ಟೆಯಲ್ಲಿ ಪ್ಯಾಕ್ ಮಾಡಿರಲಿಲ್ಲ. ಘಟನೆ ಕಾಲದಲ್ಲಿ ಕುಮಾರಸ್ವಾಮಿ ಓಡಿ ಹೋಗುವಾಗ ಆತ ಚರಂಡಿಯ ಮೇಲೆ ಬಿದ್ದು ಚರಂಡಿಯ ಕಲ್ಲು ಆತನ ತಲೆ ಹಾಗೂ ದೇಹದ ಇತರೆ ಭಾಗಗಳಿಗೆ ತಾಗಿ ಆತನಿಗೆ ಗಾಯ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.